**ನೋಂದಣಿ ಅಂಚೆ ಮತ್ತು ಸ್ವೀಕೃತಿ ಬಾಕಿ**

## ನಿರ್ದೇಶಕರು ಹಾಗೂ ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರಿ. ತಾಂತ್ರಿಕ ಶಿಕ್ಷಣ ಇಲಾಖೆ ಇವರ ನಡವಳಿಗಳು

ವಿಷಯ: ಕು॥ ಮೇಧಾ ಜನಾರ್ಧನ ಜೈವಂತ, ಉಪನ್ಯಾಸಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೋಂದೇಲ್, ಮಂಗಳೂರು ಇವರು ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ ಸರ್ಕಾರಿ ಸೇವೆಗೆ ಸೇರಿರುವ ಬಗ್ಗೆ ದಂಡನೆಯ ಆದೇಶ.

ಉಲ್ಲೇಖ:
1) ಈ ಕಚೇರಿಯ ಆದೇಶ ಸಂ: ಡಿಟಿಇ 29 ಇಎಸ್‌ಟಿ 2(ಎ) 2009 ದಿ. 13.01.2010/16539.
2) ಅಡಿಷನ್ ಡೈರೆಕ್ಟರ್ ಜನರಲ್ ಆಫ್ ಪೋಲಿಸ್ ರವರ ಕಛೇರಿ, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂ: ಜಾವಿ: 01: ಮಂವಿ: ನಾಹಜಾನಿ:2011, ದಿ: 12.02.2014
3) ಸಮಾಜ ಕಲ್ಯಾಣ ಇಲಾಖೆ ಸುತ್ತೋಲೆ ಸಂ: ಎಸ್‌ಡಬ್ಲ್ಯೂಡಿ/105/ಎಸ್‌ಎಡಿ/2013, ದಿ:08.04.2013.
4) ಸಮಾಜ ಕಲ್ಯಾಣ ಇಲಾಖೆ ಸುತ್ತೋಲೆ ಸಂ: ಎಸ್‌ಡಬ್ಲ್ಯೂಡಿ/105/ಎಸ್‌ಎಡಿ/2013, ದಿ:04.05.2013.
5) ತಹಶೀಲ್ದಾರರ ಕಾರ್ಯಾಲಯ, ಹುಬ್ಬಳ್ಳಿ ರವರ ಪತ್ರ ಸಂ: ಸಿಂಧುತ್ವ/ಸಿಆರ್/2013-14, ದಿ: 17.12.2013.
6) ಸರ್ಕಾರದ ಪತ್ರ ಸಂಖ್ಯೆ: ಇಡಿ 77 ಡಿಟಿಇ 2014 ದಿ:11.06.2014.

* - * - * - *

**ಪ್ರಸ್ತಾವನೆ:-**

ಉಲ್ಲೇಖ (1) ರಲ್ಲಿನ ಆದೇಶದಂತೆ ದಿ:27.01.2010ರಂದು ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು. ಇಲ್ಲಿ ಎಸ್.ಸಿ. ಮೀಸಲಾತಿಯಲ್ಲಿ ಕಮರ್ಷಿಯಲ್ ಪ್ರಾಕ್ಟಿಸ್ ಕೋರ್ಸ್ ವಿಭಾಗದ ಉಪನ್ಯಾಸಕರ ಹುದ್ದೆಗೆ ಕೆ.ಪಿ.ಎಸ್.ಸಿ. ಮೂಲಕ ಆಯ್ಕೆಗೊಂಡು ಕಾರ್ಯ ನಿರ್ವಹಿಸುತ್ತಾ ಬಂದಿರುತ್ತಾರೆ. ಮೇಲೆ ಓದಲಾದ ಉಲ್ಲೇಖ (2) ರಿಂದ (5)ರವರೆಗಿನ ಪತ್ರ ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಕು॥ ಮೇಧಾ ಜನಾರ್ಧನ ಜೈವಂತ, ಉಪನ್ಯಾಸಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೋಂದೇಲ್, ಮಂಗಳೂರು ಇವರು ಮೂಲತ: ಪ್ರವರ್ಗ-1ರ ಹಿಂದೂ "ಮೊಗೇರ" ಜಾತಿಗೆ ಸೇರಿದ್ದು, "ಮೊಗೆರ" ಎಸ್.ಸಿ. ಎಂದು ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಹುಬ್ಬಳ್ಳಿ ತಹಶೀಲ್ದಾರ್ ರವರ ಕಛೇರಿಯಿಂದ ಪಡೆದಿರುವುದು ಸಾಬೀತಾಗಿರುತ್ತದೆ ಹಾಗೂ ಅಪರ ತಹಶೀಲ್ದಾರ್ ಹುಬ್ಬಳ್ಳಿರವರು ಸದರಿಯವರು ಪಡೆದಿರುವ ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಉಲ್ಲೇಖ (5)ರ ರೀತ್ಯಾ ರದ್ದುಗೊಳಿಸಿರುತ್ತಾರೆ.

ಸಮಾಜ ಕಲ್ಯಾಣ ಇಲಾಖೆ ಸುತ್ತೋಲೆ ಸಂ: ಎಸ್‌ಡಬ್ಲ್ಯೂಡಿ/105/ಎಸ್‌ಎಡಿ/2013, ದಿ:04.05.2013 ರಲ್ಲಿ ಯಾವುದೇ ಸರ್ಕಾರಿ ನೌಕರ/ನೌಕರಳು ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದಿದ್ದು, ಅದನ್ನು ಸಂಬಂಧಪಟ್ಟ ತಹಶೀಲ್ದಾರ್‌ರವರು ರದ್ದುಪಡಿಸಿದ ಕೂಡಲೇ ಸದರಿ ನೌಕರ/ನೌಕರಳನ್ನು ಸೇವೆಯಿಂದ ವಜಾಗೊಳಿಸಬೇಕೆಂದು ಆದೇಶಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆ ಸುತ್ತೋಲೆ ಸಂ: ಎಸ್‌ಡಬ್ಲ್ಯೂಡಿ/179/ಎಸ್‌ಎಡಿ/2010 ದಿ:14.06.2011ರಲ್ಲಿ ಪುಟ-2ರ 1ನೇ ಕಂಡಿಕೆಯಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದು, ಅದನ್ನು ಸರ್ಕಾರಕ್ಕೆ ಹಿಂತಿರುಗಿಸದಿದ್ದರೆ, ದಿ: 11.03.2012ರ ಸರ್ಕಾರಿ ಆದೇಶದ ಸವಲತ್ತುಗಳು ಇವರಿಗೆ ವಿಸ್ತರಿಸಲು ಆಗುವುದಿಲ್ಲವೆಂದು ಹಾಗೂ ಇಂತಹವರನ್ನು ಕೆಲಸದಿಂದ ವಜಾ ಮಾಡಬೇಕೆಂದು ಮತ್ತು ಅವರು ಕ್ರಿಮಿನಲ್ ಕ್ರಮಕ್ಕೆ ಒಳಪಡುತ್ತಾರೆಂದು ಆದೇಶಿಸಲಾಗಿದೆ.

. . . . 2

ಇದಲ್ಲದೆ ಸಮಾಜ ಕಲ್ಯಾಣ ಇಲಾಖೆ ಸುತ್ತೋಲೆ ಸಂ: ಎಸ್‌ಡಬ್ಲ್ಯೂಡಿ/ 105/ಎಸ್‌ಎಡಿ/2013, ದಿ:08.04.2013 ರಲ್ಲಿ ಕಂಡಿಕೆ 07ರಲ್ಲಿ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದುಕೊಂಡಿರುವುದು ಸಾಬೀತಾದ ಪ್ರಕರಣಗಳಲ್ಲಿ ನೌಕರ/ನೌಕರಳನ್ನು ಸೇವೆಯಿಂದ ವಜಾಗೊಳಿಸಲು ಸೂಚನೆ ನೀಡಲಾಗಿದೆ

ಅಡಿಷನ್ ಡೈರೆಕ್ಟರ್ ಜನರಲ್ ಆಫ್ ಪೋಲಿಸ್, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು ಇವರು ಕು|| ಮೇಧಾ ಜನಾರ್ಧನ ಜೈವಂತ, ಉಪನ್ಯಾಸಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೋಂದೇಲ್, ಮಂಗಳೂರು ಇವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸಲು ಅವಶ್ಯ ಕ್ರಮ ಕೈಗೊಳ್ಳುವುದು ಹಾಗೂ ಸದರಿಯವರು ಪಡೆದಿರುವ ಸಂಬಳ ಇತರೆ ಭತ್ಯೆಗಳನ್ನು ನಿಯಮ (7)ಬಿ The Karnataka SC/ST & other BC (Res. Of Appt.etc) Rules 1992, ಮತ್ತು The Karnataka SC/ST & other BC (Res. Of Appt.etc) (Amendment) Act-2011 5(A) ರಂತೆ ವಸೂಲಿ ಮಾಡಲು ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ. ಹಾಗೂ ಉಲ್ಲೇಖ(6)ರ ಸರ್ಕಾರದ ಆದೇಶ ಪತ್ರದಂತೆ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

## ಆದೇಶ

**ಸಂಖ್ಯೆ: ಡಿಟಿಇ 20 ಡಿಇಕ್ಯೂ(1) 2013** **ದಿನಾಂಕ: 26-06-2014**

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕು|| ಮೇಧಾ ಜನಾರ್ಧನ ಜೈವಂತ, ಉಪನ್ಯಾಸಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೋಂದೇಲ್, ಮಂಗಳೂರು ಇವರನ್ನು ಮೂಲತಃ **ಪ್ರವರ್ಗ-I ರ ಹಿಂದು "ಮೊಗೆರ" ಜಾತಿಗೆ ಸೇರಿದ್ದು "ಮೊಗೇರ್" (MOGER) ಪರಿಶಿಷ್ಟ ಜಾತಿ** ಎಂದು ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿ ಉಪನ್ಯಾಸಕ ಹುದ್ದೆ ನೇಮಕಾತಿ ಪಡೆದಿರುವುದು ಸಾಬೀತಾದ ಹಿನ್ನಲೆಯಲ್ಲಿ ಕು|| ಮೇಧಾ ಜನಾರ್ಧನ ಜೈವಂತ, ಉಪನ್ಯಾಸಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೋಂದೇಲ್, ಮಂಗಳೂರು ಇವರನ್ನು ಉಲ್ಲೇಖ (6)ರ ಸರ್ಕಾರದ ಅನುಮತಿಯಂತೆ ಆದೇಶದ ದಿನಾಂಕದಿಂದ ಜಾರಿಗೆ ಬರುವಂತೆ **ಸರ್ಕಾರಿ ಸೇವೆಯಿಂದ ವಜಾಗೊಳಿಸಲಾಗಿದೆ.** ಹಾಗೂ ಸದರಿಯವರು ಪಡೆದಿರುವ ಸಂಬಳ ಇತರೆ ಭತ್ಯೆಗಳನ್ನು ನಿಯಮ (7)ಬಿ The Karnataka SC/ST & other BC (Res. Of Appt.etc) Rules 1992, ಮತ್ತು The Karnataka SC/ST & other BC (Res. Of Appt.etc) (Amendment) Act-2011 5(A) ರಂತೆ ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡಲು ಸಂಬಂಧಪಟ್ಟ ಪ್ರಿನ್ಸಿಪಾಲರಿಗೆ ತಿಳಿಸಲಾಗಿದೆ.

*ನಿರ್ದೇಶಕರು.*
*ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರಿ.*

**ಇವರಿಗೆ.**

1. ಕು|| ಮೇಧಾ ಜನಾರ್ಧನ ಜೈವಂತ, ಉಪನ್ಯಾಸಕರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೋಂದೇಲ್, ಮಂಗಳೂರು. (ಪ್ರಿನ್ಸಿಪಾಲರ ಮುಖಾಂತರ).
2. ಪ್ರಿನ್ಸಿಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೋಂದೇಲ್, ಮಂಗಳೂರು ಸದರಿಯವರಿಗೆ ಈ ಆದೇಶ ಜಾರಿ ಮಾಡಿ, ಸದರಿಯವರು ಇಲ್ಲಿಯವರೆಗೆ ತೆಗೆದು ಕೊಂಡಿರುವ ವೇತನ ಮತ್ತು ಇತರೆ ಆರ್ಥಿಕ ಸೌಲಭ್ಯವನ್ನು ವಸೂಲಾತಿ ಮಾಡಿ ಸರ್ಕಾರಕ್ಕೆ ಜಮಾ ಮಾಡಿ ಖಜಾನೆ ಚಲನ್ ಸಮೇತ ನಿರ್ದೇಶಕರಿಗೆ ವರದಿ ಸಲ್ಲಿಸುವುದು.
3. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರ 10 ಪ್ರತಿಗಳನ್ನು, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುವ ಸಲುವಾಗಿ ಸಿ.ಡಿ.ಯಲ್ಲಿ ಮುದ್ರಿಸಿ ಕಳುಹಿಸಲಾಗಿದೆ.

. . . .3

**ಪ್ರತಿ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.**

1. ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೋಲಿಸ್ ರವರ ಕಛೇರಿ, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ, ಬೆಂಗಳೂರು.
2. ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ, [ಉನ್ನತ ಶಿಕ್ಷಣ], ಬಹುಮಹಡಿ ಕಟ್ಟಡ, ಬೆಂಗಳೂರು.
3. ಮಹಾಲೇಖಪಾಲರು, [ಎ&ಇ], ಕರ್ನಾಟಕ [ವಲಯ], ಬೆಂಗಳೂರು.
4. ಪತ್ರಿಕಾ ಕಾರ್ಯದರ್ಶಿಗಳು, ಮಾನ್ಯ ಮುಖ್ಯಮಂತ್ರಿಗಳ ಕಾರ್ಯಾಲಯ, ವಿಧಾನಸೌಧ, ಬೆಂಗಳೂರು
5. ಪ್ರಿನ್ಸಿಪಾಲರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೋಂದೇಲ್, ಮಂಗಳೂರು (ಸಂಬಂಧಪಟ್ಟವರಿಗೆ ಸರ್ಕಾರಿ ಸೇವೆಯಿಂದ ವಜಾ ಮಾಡಲಾದ ಆದೇಶವನ್ನು ಜಾರಿ ಮಾಡುವ ಸೂಕ್ತ ಕ್ರಮಕ್ಕಾಗಿ).
6. ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
7. ವ್ಯವಸ್ಥಾಪಕರು, ಭಾರತೀಯ ಜೀವ ವಿಮಾ ನಿಗಮ, ಕಸ್ತೂರಿ ಬಾ ರಸ್ತೆ, ಬೆಂಗಳೂರು.
8. ನಿರ್ದೇಶಕರ ಆಪ್ತಶಾಖೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
9. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
10. ಇ-ಆಡಳಿತ ವಿಭಾಗಕ್ಕೆ, ಈ ಆದೇಶವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
11. ಇಎಸ್‌ಟಿ (1)ಎ, (2)ಎ, (7), (8)ಬಿ, (9), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
12. ನಗದು ವಿಭಾಗ.
13. ಲೆಕ್ಕ ಪತ್ರ ವಿಭಾಗ,
14. ಅಂಕಿ ಸಂಖ್ಯೆ ವಿಭಾಗ,
15. ಕಡತಕ್ಕೆ.

Dismiss ch